## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ ಸಿ ಸಂಃ 441/2023**

| | | |
|---|---|---|
| ಸಾಕ್ಷಿಯ ಹೆಸರುಃ | ಬಸವರಾಜು ಜಿ.ಕೆ | ಫ್ರಾಸಾಃಃ 3 |
| ತಂದೆ ಹೆಸರುಃ | ಕರಿಯಪ್ಪ | ಚಾಸಾಃಃ 4 |
| ವಯಸ್ಸುಃ | 36 ವರ್ಷ | ಪ್ರಮಾಣೀಕರಿಸಿದ ದಿಃ 08/09/2025 |
| ಉದ್ಯೋಗಃ | ಹೆಚ್.ಸಿ–176, ಪಿರಿಯಾಪಟ್ಟಣ ಪೊಲೀಸ್ ಠಾಣೆ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು ಆಗಸ್ಟ್– 2018 ರಿಂದ ಆಗಸ್ಟ್ 2024 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕಃ30/03/2023 ರಂದು ನಾನು, ಚಾಸಾ–1 ರವರೊಂದಿಗೆ ಹಲಗನಹಳ್ಳಿ ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ, ಬಾತ್ಮಿದಾರರು ಚಾಸಾ–1 ರವರಿಗೆ ಕರೆಮಾಡಿ ರಾಜನಬಿಳಗುಲಿ ಗ್ರಾಮದಲ್ಲಿ ಅಶೋಕ ಎಂಬುವವರು ತಮ್ಮ ಮನೆಯ ಮುಂದೆ ರಸ್ತೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ. ತಕ್ಷಣ ಚಾಸಾ–1 ರವರು ನನ್ನನ್ನು ಕರೆದುಕೊಂಡು ರಾಜನಬಿಳಗುಲಿ ಗ್ರಾಮದ ಬಳಿ ಹೋದಾಗ ಅಲ್ಲೇ ಇದ್ದ ಚಾಸಾ–2 ಮತ್ತು 3 ರವರನ್ನು ಕರೆದು ಬಾತ್ಮಿದಾರರಿಂದ ಬಂದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿಕೊಂಡರು. ಅವರು ಒಪ್ಪಿಕೊಂಡಿದ್ದು ನಂತರ ಅವರ ಜೊತೆ ರಾಜನಬಿಳಗುಲಿ ಗ್ರಾಮದ ಬಳಿ ಬೆಳಿಗ್ಗೆ 9.30 ಗಂಟೆಗೆ ಹೋಗಿ ನೋಡಲಾಗಿ, ಒಬ್ಬ ಆಸಾಮಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಇಟ್ಟುಕೊಂಡು

ಮಾರಾಟ ಮಾಡುತ್ತಿರುವುದು ಕಂಡುಬಂದ ಮೇರೆಗೆ ಪಂಚರ ಸಮಕ್ಷಮ ಆತನನ್ನು ವಶಕ್ಕೆ ಪಡೆದೆವು. ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್.ನ 292 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು ಇರುವುದು ಕಂಡುಬಂದಿರುತ್ತದೆ. ಸದರಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ಆತನ ಹೆಸರು ವಿಳಾಸ ಕೇಳಲಾಗಿ ಅಶೋಕ ಬಿನ್ ವೆಂಕಟೇಗೌಡ, ರಾಜನಬಿಳಗುಲಿ ಗ್ರಾಮ ಎಂದು ತಿಳಿಸಿರುತ್ತಾರೆ. ಸದರಿ ಮದ್ಯದ ಪೈಕಿ 30 ಟೆಟ್ರಾ ಪ್ಯಾಕೇಟ್‌ಗಳನ್ನು ಮಾದರಿ ತೆಗೆದು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಬಾಯಿಯನ್ನು ಹೊಲೆದು **ಎಂ** ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಸದರಿ ಮದ್ಯವನ್ನು ಹೊಂದಲು ಯಾವುದೇ ಪರವಾನಿಗೆ ಇದೆಯೇ ಎಂದು ಕೇಳಲಾಗಿ ಇಲ್ಲವೆಂದು ತಿಳಿಸಿರುತ್ತಾರೆ. ಮಹಜರ್ ನ್ನು ಬೆಳಿಗ್ಗೆ 9.45 ರಿಂದ 11.00 ಗಂಟೆಯವರೆಗೆ ಚಾಸಾ-1 ರವರ ಉಕ್ತಲೇಖದಂತೆ ನಾನೇ ಬರೆದಿರುತ್ತೇನೆ. ಸ್ಥಳದಲ್ಲಿ ಠಾಣೆಯ ಕ್ಯಾಮೇರಾದಿಂದ ಪೋಟೋ ತೆಗೆದಿರುತ್ತೇವೆ. ನಂತರ ಆರೋಪಿತ ಮತ್ತು ಮಾಲುಗಳನ್ನು ಠಾಣೆಗೆ ತಂದು ಠಾಣಾಧಿಕಾರಿ-ಚಾಸಾ.7 ರವರ ಮುಂದೆ ಚಾಸಾ-1 ರವರು ಸ್ವ ವರದಿಯನ್ನು ತಯಾರಿಸಿ ದೂರು ದಾಖಲು ಮಾಡಲು ಹಾಜರುಪಡಿಸಿರುತ್ತಾರೆ. ನಾನು ಈ ಸಂಬಂಧ ಹೇಳಿಕೆಯನ್ನು ನೀಡಿರುತ್ತೇನೆ.

3. ಸಾಕ್ಷಿಯು ನಿಪಿ.1-ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.5** ಎಂದು ಗುರುತಿಸಲಾಯಿತು.

4. ಆ ದಿನ ಮಾದರಿ ತೆಗೆದ ಮಾಲುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. ಅವುಗಳ ಪೈಕಿ ಟೆಟ್ರಾ ಪ್ಯಾಕೇಟ್‌ಗಳನ್ನು ಒಟ್ಟಾರೆಯಾಗಿ **ಮು.ಮಾ.1** ಎಂದು, ಚೀಲವನ್ನು **ಮು.ಮಾ.2** ಎಂದು ಗುರುತಿಸಲಾಯಿತು. ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಐ.ಆರ್.ಎಸ್ ವಕೀಲರಿಂದಃ**

5. ಮಾಹಿತಿ ಬಂದಾಗ ನಾನು,ಚಾಸಾ-1 ಮತ್ತು ಚಾಲಕರು ಸ್ಥಳಕ್ಕೆ ಹೋದೆವು. ಬೆಳಿಗ್ಗೆ 9.00 ಗಂಟೆಗೆ ಮಾಹಿತಿ ಬಂತು, ಸ್ಥಳಕ್ಕೆ 9.30 ಗಂಟೆಗೆ ಹೋದೆವು. ಸ್ಥಳಕ್ಕೆ ಹೋಗುವ ಮುನ್ನ ಪಂಚರು ಸಿಕ್ಕರು. ನಾವು ಸ್ಥಳಕ್ಕೆ ಹೋಗುವ ಮುನ್ನ ವ್ಯಕ್ತಿಯನ್ನು ಮತ್ತು ಸ್ಥಳವನ್ನು ನೋಡಿರಲಿಲ್ಲ. ಪಂಚರು ರಾಜನಬಿಳಗುಲಿ ಗ್ರಾಮಕ್ಕೆ ಹೋಗುವ ಮುನ್ನಾ ದೇವಸ್ಥಾನದ ಬಳಿ ದೊರಕಿದರು. ನಾವು ಸ್ಥಳಕ್ಕೆ ಹೋದಾಗ 4-5 ಜನ ಸಾರ್ವಜನಿಕರು ಇದ್ದರು. ಮಹಜರ್ ನಲ್ಲಿ ಸಾರ್ವಜನಿಕರ ಹೆಸರನ್ನು ತಿಳಿಸುವ ಅವಶ್ಯಕತೆ ಇರಲಿಲ್ಲ. ಪಿರ್ಯಾದಿಯಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ಪಿರ್ಯಾದಿಯಲ್ಲಿ ಒಬ್ಬ ಆಸಾಮಿ ನೆಲದ ಮೇಲೆ ಸ್ಯಾಚೇಟುಗಳನ್ನು ಇಟ್ಟುಕೊಂಡು ಹಣಕ್ಕೆ ಮಾರಾಟ ಮಾಡುತ್ತಿದ್ದುದ್ದು ಕಂಡು ಬಂತು ಎಂದು ಬರೆಯಲಾಗಿದೆ ಎಂದರೆ ಸರಿ. ಸಾರ್ವಜನಿಕರನ್ನು ಪ್ರತ್ಯಕ್ಷ ಸಾಕ್ಷಿದಾರರಾಗಿ ಅವರ ಹೇಳಿಕೆಗಳನ್ನು ಪಡೆಯಲು ಮತ್ತು ಪಂಚರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಹಾಗೂ ಅವರ ಅವಶ್ಯಕತೆ ಇರಲಿಲ್ಲ. ಸಾರ್ವಜನಿಕರು ಯಾವ ಊರಿನವರು ಎಂದು ಗೊತ್ತಿಲ್ಲ. ಸಾರ್ವಜನಿಕರ ಪೋಟೋ ಮತ್ತು ವೀಡೀಯೋ ಮಾಡಿಲ್ಲ. ಆರೋಪಿತನ ಮನೆ ಇದೆ, ಆದರೆ ಅಂಗಡಿ ಇಲ್ಲ. ಆರೋಪಿತನ ಮನೆಯ ಪೋಟೋ ತಗೆದಿಲ್ಲ, ಆದರೆ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಆರೋಪಿತನ ಮನೆ ಇದೆ ಎಂದು ಕಾಣಿಸಿದ್ದೇವೆ. ಆರೋಪಿತ ಇದೇ ತನ್ನ ಮನೆ ಎಂದು ತಿಳಿಸಿದ್ದರು. ಆರೋಪಿತನ ಮನೆಯ ಮುಂದೆ ಡಾಂಬರ್ ರಸ್ತೆ ಇದೆ. ಆರೋಪಿತನ ಮುನೆಗೂ ಡಾಂಬರ್ ರಸ್ತೆಗೂ 15 ಅಡಿ ಅಂತರ ಇದೆ, ಆ ಅಂತರವು ಮಣ್ಣು ಮತ್ತು ಕಲ್ಲಿನಿಂದ ಕೂಡಿದ ಕಚ್ಚಾ ರಸ್ತೆ ಇದೆ.

6. ಮದ್ಯದ ಟೆಟ್ರಾ ಪ್ಯಾಕೇಟುಗಳು ನೆಲದ ಮೇಲೆ ಬಿಳಿ ಬಣ್ಣದ ಬ್ಯಾಗ್ ನಲ್ಲಿತ್ತು. ಚೀಲ ಒಂದೂವರೆ ಅಡಿ ಅಗಲ, ಎರಡು ಅಡಿ ಉದ್ದ ಇರಬಹುದು. ಆ ಚೀಲ ಯಾವ ಕಂಪನಿಗೆ ಸೇರಿದ್ದು ಎಂದು ಗಮನಿಸಿಲ್ಲ. ಅದರ ಮೇಲೆ ಯಾವ ಗುರುತು ಇತ್ತೆಂದು ಗಮನಿಸಿಲ್ಲ. ಸಾಮಾನ್ಯವಾಗಿ ನೆಲದ ಮೇಲೆ ಚೀಲ ಇಟ್ಟರೆ ಮಣ್ಣು ಅಂಟಿಕೊಳ್ಳುತ್ತದೆ ಎಂದರೆ ಸರಿಯಲ್ಲ. ಮು.ಮಾ.2ರ ಮೇಲೆ ಮಣ್ಣಿನ ಗುರುತುಗಳು ಇಲ್ಲ ಎಂದರೆ

ಸರಿಯಲ್ಲ. ಮು.ಮಾ.2 ನ್ನು ಕೃತ್ಯಕ್ಕಾಗಿ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ಮದ್ಯದ ತಯಾರಿಕಾ ಕಂಪನಿ ಮತ್ತು ತಯಾರಿಕಾ ದಿನಾಂಕ, ಮುಕ್ತಾಯದ ದಿನಾಂಕ ಗೊತ್ತಿಲ್ಲ. ಮಹಜರ್ ಮತ್ತು ಹೇಳಿಕೆಯಲ್ಲಿ ಮದ್ಯದ ತಯಾರಿಕಾ ಕಂಪನಿ ಹೆಸರು ತಿಳಿಸಿಲ್ಲ. ಟೆಟ್ರಾ ಪ್ಯಾಕೇಟ್‌ನ ಬಣ್ಣ ಗೊತ್ತಿಲ್ಲ. ಒಂದು ಟೆಟ್ರಾ ಪ್ಯಾಕೇಟ್‌ನ ಬೆಲೆ ಎಷ್ಟೆಂದು ಗೊತ್ತಿಲ್ಲ. ಆದರೆ ಒಟ್ಟು ಟೆಟ್ರಾ ಪ್ಯಾಕೇಟ್ ಗಳ ಬೆಲೆಯನ್ನು ಮಹಜರಿನಲ್ಲಿ ನಮೂದಿಸಿದ್ದೇವೆ. ಆ ರೀತಿ ಮಹಜರ್ ನಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕವಾಗಿ ಎಷ್ಟು ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ತಿಳಿದುಕೊಂಡಿಲ್ಲ. ನಮಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪಂಚರನ್ನು ಕರೆದುಕೊಂಡು ಸ್ಥಳಕ್ಕೆ ಹೋದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತ ಸಾರ್ವಜನಿಕ ಸ್ಥಳದಲ್ಲಿ ಮದ್ಯದ ಟೆಟ್ರಾ ಪ್ಯಾಕೇಟ್‌ಗಳನ್ನು ಹೊಂದಿ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದನ್ನು ಅಮಾನತ್ತು ಪಡಿಸಿಕೊಂಡು, ಮಹಜರ್ ತಯಾರಿಸಿ, ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲದಿದ್ದರೂ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**